7

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಡಬಾ ಅಮಾನಿಕೆರೆಯ ಮೂಲಕ ಹೆಚ್.ಎ.ಎಲ್. ಹೆಲಿಕಾಪ್ಟರ್ ತಯಾರಿಕಾ ಘಟಕ ಮತ್ತು ಎರಡು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ನೀರು ಸರಬರಾಜು ಮಾಡಲು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ-12 ರ ಅಭಿವೃದ್ಧಿ ಕಾಮಗಾರಿಯ ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

****

ಓದಲಾಗಿದೆ:-

1. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾನೀನಿನಿ/ತಾಂತ್ರಿಕ-4/D-12 TBC/HAL/KADABA TANK/ 2021—22/770, ದಿನಾಂಕ:05-08-2021
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಾನೀನಿನಿ/ತಾಂತ್ರಿಕ-4/ಸರ್ಕಾರದ ಪತ್ರಗಳು/ D-12 & D-15 / 2021-22/2731, ದಿನಾಂಕ:30-12-2021.

ಪ್ರಸ್ತಾವನೆ:-

ಮೇಲೆ ಓದಲಾದ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಇವರು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ 75.550 ಕಿ.ಮೀ. ನಲ್ಲಿ ಬರುವ ವಿತರಣಾ ನಾಲೆ 12 ರ ಅಚ್ಚುಕಟ್ಟು ಪ್ರದೇಶ 10,729 ಎಕರೆ ಇದ್ದು, ನಾಲೆಯ ಸಾಮರ್ಥ್ಯ 64.69 ಕ್ಯೂಸೆಕ್ಸ್ ಗಳಾಗಿರುತ್ತದೆ; ಸದರಿ ವಿತರಣಾ ನಾಲೆಯ ಪಂಕ್ತೀಕರಣದಲ್ಲಿ 10 ಮೈನರ್ ಗಳು ಮತ್ತು 18 Water Course ಗಳು ಹಾಗೂ ಕಡಬಾ ಅಮಾನಿಕೆರೆಯೂ ಸೇರಿದಂತೆ 8 ಕೆರೆಗಳು ಬರುತ್ತಿದ್ದು, ಸದರಿ ಕೆರೆಗಳ ಒಟ್ಟು ಸಾಮರ್ಥ್ಯ 704.74 ಎಂ.ಸಿ.ಎಫ್.ಟಿ. ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

2. ಸರ್ಕಾರಿ ಆದೇಶ ಸಂಖ್ಯೆ:ಜಸಂಇ 93 ಎನ್ ಹೆಚ್ ಪಿ 2002, ದಿನಾಂಕ:30-08-2012 ರಲ್ಲಿ ತುಮಕೂರು ಶಾಖಾ ನಾಲೆ ಅಡಿಯಲ್ಲಿ ಬರುವ ವಿತರಣಾ ನಾಲೆ-12 ರ ವ್ಯಾಪ್ತಿಯಲ್ಲಿ ಬರುವ ಕಡಬಾ ಅಮಾನಿಕೆರೆಯಿಂದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಕಡಬಾ ಮತ್ತು ಇತರೆ 10 ಗ್ರಾಮಗಳಿಗೆ 14.95 ಎಂ.ಸಿ.ಎಫ್.ಟಿ. ಹಾಗೂ ಕೊಪ್ಪ ಮತ್ತು ಇತರೆ 11 ಗ್ರಾಮಗಳಿಗೆ 11.72 ಎಂ.ಸಿ.ಎಫ್.ಟಿ. ನೀರನ್ನು ಹಂಚಿಕೆ ಮಾಡಲಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರು ವರದಿ ಮಾಡಿರುತ್ತಾರೆ.

3. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ:ಜಸಂಇ 15 ಎನ್ಎಂಎಸ್ 2014, ದಿನಾಂಕ:24-07-2017 ರಲ್ಲಿ ಹೆಚ್.ಎ.ಎಲ್. ಹೆಲಿಕಾಪ್ಟರ್ ತಯಾರಿಕಾ ಘಟಕಕ್ಕೆ ಕಡಬಾ ಅಮಾನಿಕೆರೆಯಿಂದ 43.77 ಎಂ.ಸಿ.ಎಫ್.ಟಿ.

ನೀರನ್ನು ನೀಡಲು ಸಹಮತಿ ನೀಡಲಾಗಿದೆ ಹಾಗೂ ತಯಾರಿಕಾ ಘಟಕವು ಕಾರ್ಯಾರಂಭ ಮಾಡಿದ ನಂತರ 2024 ಕ್ಕೆ 78.78 ಎಂ.ಸಿ.ಎಫ್.ಟಿ. ನೀರನ್ನು ಒದಗಿಸಬೇಕಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ವರದಿ ಮಾಡಿರುತ್ತಾರೆ.

4. ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ-12 ರ ಹಾಲಿ ವಿನ್ಯಾಸಿತ ಸಾಮರ್ಥ್ಯವು 64.69 ಕ್ಯೂಸೆಕ್ಸ್ ಆಗಿದ್ದು, ಇದರ ಜೊತೆಗೆ ಹೆಚ್ಚುವರಿಯಾಗಿ 02 ಸಂಖ್ಯೆಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಮತ್ತು ಹೆಚ್.ಎ.ಎಲ್ ತಯಾರಿಕಾ ಘಟಕಕ್ಕೆ ಅವಶ್ಯ ಪ್ರಮಾಣದ ನೀರನ್ನೂ ಒದಗಿಸಲು ಸದರಿ ನಾಲೆಯ ಸಾಮರ್ಥ್ಯವನ್ನು 91 ಕ್ಯೂಸೆಕ್ಸ್ ಗೆ ಹೆಚ್ಚಿಸಲು ಸದರಿ ನಾಲೆಯನ್ನು ಅಭಿವೃದ್ಧಿಪಡಿಸುವ ಅವಶ್ಯಕತೆ ಇರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರು ವರದಿ ಮಾಡಿರುತ್ತಾರೆ.

5. ಸದರಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು 2018-19ನೇ ಸಾಲಿನ ಜಲ ಸಂಪನ್ಮೂಲ ಇಲಾಖೆಯ ದರಸೂಚಿ ಹಾಗೂ 2018-19 ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಸೂಚಿಯನ್ವಯ ರು. 25.00 ಕೋಟಿ ಮೊತ್ತಕ್ಕೆ ತಯಾರಿಸಲಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರು ವರದಿ ಮಾಡಿರುತ್ತಾರೆ.

6. ಸದರಿ ಪ್ರಸ್ತಾವನೆಗೆ ದಿನಾಂಕ:29-09-2020 ರಂದು ನಡೆದ ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿಯು 10ನೇ ಸಭೆಯಲ್ಲಿ ತೀರುವಳಿ ನೀಡಿದ್ದು, ದಿನಾಂಕ:22-07-2021 ರಂದು ನಡೆದ ನಿಗಮದ ಮಂಡಳಿಯ 73ನೇ ಸಭೆಯಲ್ಲಿ ಅನುಮೋದನೆಯಾಗಿದ್ದು, ಆಡಳಿತಾತ್ಮಕ ಅನುಮೋದನೆ ನೀಡಲು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ರವರು ಕೋರಿರುತ್ತಾರೆ.

7. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಜಸಂಇ **66** ಎಸ್ ಹೆಚ್ ಪಿ **2021,**
ಬೆಂಗಳೂರು, ದಿನಾಂಕ:**19-05-2022**

ಕಡಬಾ ಅಮಾನಿಕೆರೆಯ ಮೂಲಕ ಹೆಚ್.ಎ.ಎಲ್. ಹೆಲಿಕಾಪ್ಟರ್ ತಯಾರಿಕಾ ಘಟಕ ಮತ್ತು ಎರಡು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ನೀರು ಸರಬರಾಜು ಮಾಡಲು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ವಿತರಣಾ ನಾಲೆ-12 ರ ಅಭಿವೃದ್ಧಿ ಕಾಮಗಾರಿಯ ರೂ.25.00 ಕೋಟಿ ಮೊತ್ತದ ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 439 ಆಕೋ-1/2021, ದಿನಾಂಕ:18-03-2022 ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ:ಪಿಡಿಎಸ್ 27 ಎಂಸಿಎಂ 2021-ಪಿಪಿಡಿ, ದಿನಾಂಕ:18-10-2021 ರಲ್ಲಿ ನೀಡಲಾದ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

17/05/2022

( ಮನೋಹರ ವೈ. ರೊಟ್ಟೆ )
ವಿಶೇಷ ಕರ್ತವ್ಯಾಧಿಕಾರಿ
ಜಲಸಂಪನ್ಮೂಲ ಇಲಾಖೆ

ಪ್ರತಿಯನ್ನು:-

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ಕಾನೀನಿನಿ, ತುಮಕೂರು.
4. ನಿರ್ದೇಶಕರು, ಸಂಪೂರ್ಣ ಯೋಜನಾ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.
5. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-257/2022, ದಿನಾಂಕ:12-05-2022).
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

+++++